# <u>ನಗರಸಭೆ, ಚಿಕ್ಕಮಗಳೂರು</u>

ದಿನಾಂಕ:24/02/2007 ರಂದು ಮಾನ್ಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ 12.00 ಘಂಟೆಗೆ ನಡೆದ ನಗರಸಭೆಯ ಆಯವ್ಯಯ ಅಂದಾಜು ಪೂರ್ವಭಾವಿ ಎರಡನೇ ಸಭೆಯ ನಡವಳಿಕೆಗಳು.

--:***:--:***:--:***:--

ಸಭೆಯ ಪೌರಾಯುಕ್ತರು ಸ್ವಾಗತಿಸಿ ಮಾತನಾಡುತ್ತಾ, ನಗರಸಭೆಯ 2007-08 ನೇ ಸಾಲಿನ ಆಯವ್ಯಯ ಅಂದಾಜು ಬಗ್ಗೆ ಸಾರ್ವಜನಿಕರಿಂದ ಸಲಹೆ ಅಭಿಪ್ರಾಯ ಪಡೆಯಲು ಈ ಎರಡನೇ ಪೂರ್ವಭಾವಿ ಸಭೆಯನ್ನು ಕರೆದಿದ್ದು, ತಾವುಗಳು ಹಿಂದಿನ ಸಭೆಯಲ್ಲಿ ನೀಡಿದಂತೆ ಈ ಸಭೆಯಲ್ಲಿಯೂ ತಮ್ಮ ಉತ್ತಮವಾದ ಸಲಹೆ ಸೂಚನೆಗಳನ್ನು ನೀಡಬೇಕೆಂದು ಕೋರಿ, ಎಲ್ಲರನ್ನೂ ಸಭೆಗೆ ಸ್ವಾಗತಿಸಿದರು.

ಶ್ರೀ. ಎಂ.ಎಲ್. ಮೂರ್ತಿ, ಮಾಜಿ ಸಿಡಿಎ ಅಧ್ಯಕ್ಷರು, ಚಿಕ್ಕಮಗಳೂರು ಇವರು ಮಾತನಾಡುತ್ತಾ, ನಗರದಲ್ಲಿ ಅಲೆಮಾರಿ ಹಂದಿಗಳ ಕಾಟ ವಿಪರೀತವಾಗಿದ್ದು, ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ ನಗರದಿಂದ ಹೊರಗೆ ಹಂದಿ ಸಾಕಾಣಿಕೆ ಮಾಡಲು ಶೆಡ್‌ಗಳನ್ನು ನಗರದಲ್ಲಿ ಉತ್ಪನ್ನವಾಗುವ ತ್ಯಾಜ್ಯಗಳನ್ನು ಈ ಹಂದಿ ಸಾಕಾಣಿಕೆದಾರರಿಗೆ ಇಂತಿಷ್ಟು ಬೆಲೆಗೆ ಎಂದು ನೀಡಿದರೆ ತ್ಯಾಜ್ಯವೂ ವಿಲೇವಾರಿಯಾಗುತ್ತದೆ. ಮತ್ತು ನಗರಸಭೆಗೆ ಆದಾಯವೂ ಬರುತ್ತದೆ ಎಂದು ಸಲಹೆ ನೀಡಿದರು.

ಹಾಗೂ ನಗರದ ಮಧ್ಯಭಾಗದಲ್ಲಿರುವ ಹಳೆಯ ಜೈಲು ಕಟ್ಟಡವನ್ನು ತೆರವುಗೊಳಿಸಿ ಈ ಸ್ಥಳದಲ್ಲಿ ನಗರಸಭೆಯಿಂದ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಿ ಬಾಡಿಗೆಗೆ ಕೊಟ್ಟಲ್ಲಿ ಲಕ್ಷಾಂತರ ರೂ. ಆದಾಯ ನಗರಸಭೆಗೆ ಬರುತ್ತದೆ ಎಂದು ಸಲಹೆ ನೀಡಿದರು.

ಶ್ರೀ ನಾಗೇಂದ್ರ, ರಚನಾ ಬಿಲ್ಡರ್ಸ್, ಚಿಕ್ಕಮಗಳೂರು ಇವರು ಮಾತನಾಡುತ್ತಾ, ನಗರದಲ್ಲಿರುವ ನಗರಸಭಾ ಪಾರ್ಕ್‌ಗಳನ್ನು ಗುರುತಿಸಿ, ಇವುಗಳನ್ನು ಅಭಿವೃದ್ಧಿಪಡಿಸಬೇಕು ಹಾಗೂ ನಗರಸಭೆಯ ಕೆಲವು ಪಾರ್ಕ್‌ಗಳು, ನಿವೇಶನಗಳು ಒತ್ತುವರಿಯಾಗುತ್ತಿದ್ದು, ನಗರಸಭಾ ಆಸ್ತಿಯನ್ನು ಗುರುತಿಸಿ ಇವುಗಳ ಮುಂದೆ ಸಿಮೆಂಟ್ ಬೋರ್ಡ್ ಮಾಡಿಸಿ ನಗರಸಭಾ ಆಸ್ತಿ ಎಂದು ನಾಮಫಲಕ ಹಾಕಿದಲ್ಲಿ ಒತ್ತುವರಿಯನ್ನು ತಡೆಗಟ್ಟಬಹುದು. ಹಾಗೂ ದೀಪಾ ನರ್ಸಿಂಗ್ ಹೋಂ ಕೆಳಭಾಗದ ಬೈಪಾಸ್ ರಸ್ತೆಯಲ್ಲಿ ಗುಂಡಿಗಳು ಬಿದ್ದು ವಾಹನಗಳ ಸಂಚಾರಕ್ಕೆ ಬಹಳ ತೊಂದರೆಯಾಗಿರುವುದರಿಂದ ನಗರಸಭೆ ವತಿಯಿಂದ ಈ ರಸ್ತೆಯನ್ನು ಅಭಿವೃದ್ಧಿಪಡಿಸಿ, ಗುಂಡಿಗಳನ್ನು ಮುಚ್ಚಿಸಬೇಕೆಂದು ಸಲಹೆ ನೀಡಿದರು.

ಶ್ರೀ. ಎಂ.ಎಲ್. ಮೂರ್ತಿಯವರು ಮಾತನಾಡುತ್ತಾ, ನಗರಸಭಾ ಪಾರ್ಕ್‌ಗಳನ್ನು ಆಯಾ ವಾರ್ಡ್‌ಗಳಲ್ಲಿನ ಸಂಘಸಂಸ್ಥೆಗಳವರಿಗೆ ವಹಿಸಿ ಕೊಟ್ಟಲ್ಲಿ ಅವರು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಿ ಉತ್ತಮವಾಗಿ ನಿರ್ವಹಣೆ ಮಾಡುತ್ತಾರೆಂದು ಸಲಹೆ ನೀಡಿದರು.

ಶ್ರೀ. ನಾಗೇಂದ್ರರವರು ಮುಂದುವರಿಸುತ್ತಾ, ನಗರಸಭಾ ವ್ಯಾಪ್ತಿಯಲ್ಲಿನ ನಾಗರೀಕರು ಎಸ್.ಎ.ಎಸ್ ನಲ್ಲಿ ತಮ್ಮ ಕಟ್ಟಡಗಳ ಕಂದಾಯ ಘೋಷಣೆ ಮಾಡಿಕೊಳ್ಳುವಾಗ ಕಟ್ಟಡದ ಅವಧಿ ಕಡಿಮೆ ಇದ್ದರೂ ಕೂಡ ಹೆಚ್ಚು ತೋರಿಸಿ, ಹಳೇ ಕಟ್ಟಡಗಳಿಗೆ ಸವಕಳಿ ದರ, ಈ ಸೌಲಭ್ಯವನ್ನು ದುರುಪಯೋಗ ಪಡಿಸಿಕೊಂಡು ಹೊಸ ಕಟ್ಟಡಗಳಿಗೆ ಹೆಚ್ಚಿನ ಅವಧಿ ತೋರಿಸಿ ಕಡಿಮೆ ಕಂದಾಯ ಪಾವತಿಸಿ ನಗರಸಭೆಗೆ ವಂಚಿಸುತ್ತಿದ್ದಾರೆ. ಇಂತಹವರನ್ನು ಗುರುತಿಸಿ ಪರಿಶೀಲಿಸಿ ಸೂಕ್ತ ಕ್ರಮವಹಿಸಿದಲ್ಲಿ ನಗರಸಭೆಗೆ ನಷ್ಟ ಉಂಟು ಮಾಡುತ್ತಿರುತ್ತಾರೆ ಇದನ್ನು ತಪ್ಪಿಸಬೇಕು ಎಂದರು. ಹಾಗೂ ಬ್ಯಾಂಕ್‌ನಲ್ಲಿ ಮನೆ ನಿರ್ಮಾಣಕ್ಕೆ ಇತರೆ ಸಾಲಗಳಿಗೆ ಇ.ಸಿ, ಎಸ್‌ಎಎಸ್ ನಕಲು ಇತರೆ ದಾಖಾಲಾತಿಗಳನ್ನು ಕಡ್ಡಾಯವಾಗಿ ನೀಡಬೇಕೆಂದು ಕೇಳುತ್ತಾರೆ. ಅದರಂತೆಯೇ ನಗರಸಭಾ ಅಧಿಕಾರಿಗಳು ಬ್ಯಾಂಕ್‌ಗಳ ಅಧಿಕಾರಿಗಳನ್ನು ಸಂಪರ್ಕಿಸಿ ನಗರಸಭೆಗೆ ಚಾಲ್ತಿ ಸಾಲಿನವರೆಗೆ ಪೂರ್ಣಕಂದಾಯ ಪಾವತಿ ಮಾಡಿದ ರಶೀದಿಯನ್ನು ಕಡ್ಡಾಯವಾಗಿ ಎಲ್ಲಾ ರೀತಿಯ ಸಾಲ ನೀಡುವಾಗ ಪಡೆಯಬೇಕೆಂದು ನಿಯಮ ಪಾಲಿಸಲು ಕೋರಿದರೆ ಇದರಿಂದಲೂ ಸಹ ನಗರಸಭೆಗೆ ಕಂದಾಯ ಹೆಚ್ಚಾಗಿ ಬರುತ್ತದೆ ಎಂದು ಹಾಗೂ ನಗರದಲ್ಲಿ

PDF Created with deskPDF PDF Writer - Trial :: http://www.docudesk.com

ಅಭಿವೃದ್ಧಿಯಾಗದ ಮೂಲಭೂತ ಸೌಲಭ್ಯಗಳಿಂದ ವಂಚಿತವಾದ ಪ್ರದೇಶಗಳಿಗೆ ಆದ್ಯತೆ ನೀಡಿ ಅಭಿವೃದ್ಧಿಪಡಿಸಬೇಕು ಹಾಗೂ ಚರಂಡಿ, ರಸ್ತೆ, ನೀರು ಸಂಪರ್ಕ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕೆಂದು ಕೋರಿದರು.

ಶ್ರೀ. ರಾಧಾಕೃಷ್ಣ , ಸಂಚಾಲಕರು , ದಲಿತ ಸಂಘರ್ಷ ಸಮಿತಿ ಇವರು ಮಾತನಾಡುತ್ತಾ ನಗರಸಭೆಗೆ ಹೆಚ್ಚಿನ ಆದಾಯ ಬಂದಲ್ಲಿ ಮಾತ್ರ ನಗರದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ತಿಳಿಸುತ್ತಾ, ನಗರದಲ್ಲಿ ಅಲೆಮಾರಿ ಹಂದಿಗಳು ಹೆಚ್ಚಾಗಿದ್ದು, ಪರವಾನಗಿ ಇಲ್ಲದೇ ಹಂದಿಮಾಂಸ ಮಾರಾಟ ಮಾಡುವ ಅಂಗಡಿಗಳು ಎಲ್ಲೆಂದರಲ್ಲಿ ತಲೆಎತ್ತುತ್ತಿದ್ದು, ಕೆಲವರು ಮಾತ್ರ ಆದಾಯ ಗಳಿಸುತ್ತಿದ್ದಾರೆ. ಈ ಬಗ್ಗೆ ನಗರಸಭೆಯಿಂದ ಹಂದಿ ಸಾಕಾಣಿಕೆದಾರರಿಗೆ ನಗರದ ಹೊರವಲಯದಲ್ಲಿ ಒಂದು ನಿರ್ಧಿಷ್ಟ ಪ್ರದೇಶದಲ್ಲಿ ವಾಸಕ್ಕೆ ವ್ಯವಸ್ಥೆ ಮಾಡಿಕೊಡಬೇಕು ಹಾಗೂ ಹಂದಿ ಸಾಕಾಣಿಕೆಗೆ ಶೆಡ್‌ಗಳನ್ನು ನಿರ್ಮಾಣ ಮಾಡಿಕೊಟ್ಟು ಇದಕ್ಕೆ ಇಂತಿಷ್ಟು ಹಣ ಎಂದು ನಿಗಧಿಪಡಿಸಿ ವಸೂಲಿ ಮಾಡಿದಲ್ಲಿ ನಗರಸಭೆಗೆ ಆದಾಯ ಬರುತ್ತದೆ ಎಂಬುದಾಗಿ ಅಭಿಪ್ರಾಯಿಸಿದರು ಹಾಗೂ ನಗರದ ಅಂಬೇಡ್ಕರ್ ರಸ್ತೆಯಲ್ಲಿ ಕೆಲವು ಹಳೇ ನಗರಸಭಾ ಕಟ್ಟಡಗಳು ರಸ್ತೆ ಮಾರ್ಜಿನ್‌ಗಿಂತ ಮುಂದೆ ಕಟ್ಟಿದ್ದು, ಇವುಗಳನ್ನು ಒಡೆದು ರಸ್ತೆ ಮಾರ್ಜಿನ್ ಬಿಟ್ಟು ಹೊಸ ಸಂಕೀರ್ಣಗಳನ್ನು ನಿರ್ಮಾಣ ಮಾಡಿ ಬಾಡಿಗೆಗೆ ನೀಡಿದಲ್ಲಿ ಇದರಿಂದಲೂ ನಗರಸಭೆಗೆ ಹೆಚ್ಚಿನ ಆದಾಯ ಬರುತ್ತದೆ. ಹಾಗೂ ಶೇ. 18 ರ ಯೋಜನೆಯಡಿ ಬಂದಿರುವ ಅನುದಾನವನ್ನು ಯಾವ ಬಾಬಿಗೆ ಎಷ್ಟೆಷ್ಟು ಖರ್ಚು ಮಾಡಿದ್ದೀರ ಎಂಬ ಬಗ್ಗೆ ನಗರಸಭೆಯಿಂದ ಶ್ವೇತಪತ್ರ ಹೊರಡಿಸಬೇಕು. ಶೇ 18 ರ ಅನುದಾನ ಸಮರ್ಪಕವಾಗಿ ಬಳಕೆಯಾಗಿಲ್ಲ. ಈ ಅನುದಾನದಲ್ಲಿ ಸಮುದಾಯ ಭವನಗಳನ್ನು ಕಟ್ಟಿಸಿ ಅವುಗಳಿಗೆ ಬೀಗ ಹಾಕಿ ಬಿಟ್ಟಿದ್ದು ಇದರಿಂದ ಯಾರಿಗೂ ಪ್ರಯೋಜನವಾಗುತ್ತಿಲ್ಲ, ಆದ್ದರಿಂದ ಸಮುದಾಯ ಭವನಗಳಿಗೆ ಬದಲಾಗಿ ಕಡುಬಡವ ಎಸ್‌ಸಿ:ಎಸ್‌ಟಿ ಜನರಿಗೆ ವಾಸಕ್ಕೆ ಮನೆಗಳನ್ನು ನಿರ್ಮಿಸಿಕೊಡಬೇಕೆಂದು ಕೋರಿದರು. ಹಾಗೂ ಕಟ್ಟಿರುವ ಸಮುದಾಯಭವನವನ್ನು ಉಪಯೋಗಿಸಿಕೊಳ್ಳಲು ಬಾಡಿಗೆ ವಿಧಿಸಿದಲ್ಲಿ ಇದರಿಂದಲೂ ನಗರಸಭೆಗೆ ಆದಾಯ ಬರುತ್ತದೆ ಎಂದು ಸಲಹೆ ನೀಡಿದರು ಹಾಗೂ ಐಜಿ ರಸ್ತೆ ಅಗಲೀಕರಣಗೊಳಿಸಬೇಕು ಎಂದು ಕೋರಿದರು.

ಶ್ರೀ. ಎಂ.ಎಲ್. ಮೂರ್ತಿಯವರು ಮಾತನಾಡುತ್ತಾ, ಕಂದಾಯವನ್ನು ಕಟ್ಟದಿರುವ ಎಸ್‌ಸಿ: ಎಸ್‌ಟಿ ಜನಾಂಗದವರ ಕಂದಾಯವನ್ನು ಶೇ 18 ರ ಅನುದಾನದಲ್ಲಿ ನಗರಸಭೆಯವರೇ ಭರಿಸಿ ಈ ಹಣವನ್ನು ನಗರದ ಬಡಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಬಳಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಮಾನ್ಯ ಶಾಸಕರು ಎಲ್ಲರ ಸಲಹೆ ಅಭಿಪ್ರಾಯಗಳನ್ನು ಸ್ವೀಕರಿಸಿ, ನಗರಸಭೆಯ 2007-08 ನೇ ಸಾಲಿನ ಬಜೆಟ್‌ನಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಕುಡಿಯುವ ನೀರು ಸಂಪರ್ಕ, ವಿದ್ಯುಚ್ಛಕ್ತಿ ಸಂಪರ್ಕ, ನೈರ್ಮಲ್ಯ ಕಾರ್ಯಗಳಿಗೆ ಹೆಚ್ಚಿನ ಹಣವನ್ನು ಮೀಸಲಿಡಬೇಕೆಂದು ಸೂಚಿಸಿದರು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ 2007-08 ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು. ಮುಂದಿನ ಸಾಲಿನಲ್ಲಿ ಆಗುವ ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲ ಕ್ರೋಢೀಕರಿಸುವುದು ನಮ್ಮೆಲ್ಲರ ಜವಾಬ್ದಾರಿ. ಎಲ್ಲರೂ ತೆರಿಗೆ ಪಾವತಿಸುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ಮನವಿ ಮಾಡಿದರು.

ಸಭೆಯ ಮುಂದೆ ಬೇರೆ ಯಾವುದೇ ಇತರೆ ವಿಷಯಗಳ ಇಲ್ಲದ ಕಾರಣ ಪೌರ ಆಯುಕ್ತರ ವಂದನೆಗಳೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

ಆಡಳಿತಾಧಿಕಾರಿಗಳು,
ನಗರಸಭೆ, ಚಿಕ್ಕಮಗಳೂರು.

PDF Created with deskPDF PDF Writer - Trial :: http://www.docudesk.com